# ಕರ್ನಾಟಕ ವಿಧಾನ ಪರಿಷತ್ತು
## 147 ನೇ ಅಧಿವೇಶನ 2022

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 235
ಮಾನ್ಯ ಸದಸ್ಯರ ಹೆಸರು : ಶ್ರೀ. ಅ.ದೇವೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 14-09-2022
ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು-ಮಾಗಡಿ ರಾಷ್ಟ್ರೀಯ ಹೆದ್ದಾರಿ 85ರಲ್ಲಿ ಚತುಷ್ಪಥ ರಸ್ತೆ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು, ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; | ಕೆಶಿಪ್-3 ರ ಯೋಜನೆ (ADB 2nd Loan) HAM ಪ್ಯಾಕೇಜ್-1 ರಲ್ಲಿ ಒಟ್ಟು 114.30 ಕಿಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು ರೂ. 895.00 ಕೋಟಿ ಅಂದಾಜು ಮೊತ್ತಕ್ಕೆ ಅನುಮೋದನೆಯಾಗಿದ್ದು, ಸದರಿ ಅಂದಾಜಿನಲ್ಲಿ 3 ವಿವಿಧ ರಸ್ತೆ ಕಾಮಗಾರಿಗಳು ಒಳಗೊಂಡಿರುತ್ತದೆ.<br><br>ಈ ಯೋಜನೆಯಲ್ಲಿ ಒಳಗೊಂಡಿರುವ ಬೆಂಗಳೂರು ನೈಸ್ ರಸ್ತೆ – ಮಾಗಡಿ ರಸ್ತೆ (ಜಂಕ್ಷನ್) ನಿಂದ ಮಾಗಡಿ ವರೆಗೆ 36.7 ಕಿಮೀ ಉದ್ದದ ಚತುಷ್ಪಥ ರಸ್ತೆ ನಿರ್ಮಾಣ ಮತ್ತು ಮಾಗಡಿಯಿಂದ ಎನ್-ಹೆಚ್-75 ವರೆಗೆ ಚಿಕ್ಕಮುದಿಗೆರೆ, ಐಯಿಂದಹಳ್ಳಿ ಮೂಲಕ ಹಾದುಹೋಗುವ 14.0 ಕಿಮೀ ಉದ್ದಕ್ಕೆ ದ್ವಿಪಥ ರಸ್ತೆಯನ್ನಾಗಿ ಒಟ್ಟಾರೆ 50.7 ಕಿಮೀ ಉದ್ದಕ್ಕೆ ಅಭಿವೃದ್ಧಿಯನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಕೆಶಿಪ್-3 ಪ್ಯಾಕೇಜ್-1 ರಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಸದರಿ ಕಾಮಗಾರಿಯು, ದಿನಾಂಕ: 01.07.2020 ರಂದು ಪ್ರಾರಂಭಗೊಂಡಿರುತ್ತದೆ.<br><br>ಪ್ರಸ್ತುತ, ರಸ್ತೆಯ ಅಕ್ಕ ಪಕ್ಕದ ಮರಗಳನ್ನು ತೆರವುಗೊಳಿಸಿ, ವಿದ್ಯುತ್ ಕಂಬಗಳನ್ನು ಸ್ಥಳಾಂತರಗೊಳಿಸಿ, ಚರಂಡಿ ನಿರ್ಮಾಣ ಕೈಗೊಂಡು ರಸ್ತೆಯ ಇತರೆ ಕೆಲಸಗಳು ಪ್ರಗತಿಯಲ್ಲಿರುತ್ತದೆ. ಅಲ್ಲದೆ ರಸ್ತೆಯ ವ್ಯಾಪ್ತಿಯಲ್ಲಿ ಬರುವ ಸೇತುವೆಗಳು, ಸಿಡಿ. ವರ್ಕ್‌ಗಳು ಸಹ ಪ್ರಗತಿಯಲ್ಲಿರುತ್ತದೆ. ಹಾಲಿ ಒಟ್ಟು 14.80.ಕಿಮೀ ಉದ್ದದ ಚತುಷ್ಪತ ರಸ್ತೆಯ ಡಾಂಬರೀಕರಣ (DBM) ಹಾಗೂ 12.82 ಕಿಮೀ ಉದ್ದದ ದ್ವಿಪಥ ರಸ್ತೆಯ ಡಾಂಬರೀಕರಣ (DBM) ಪೂರ್ಣಗೊಂಡಿರುತ್ತದೆ.<br><br>ಒಟ್ಟಾರೆ 50.7 ಕಿಮೀ ಉದ್ದದಲ್ಲಿ 27.62 ಕಿಮೀ ಪೂರ್ಣಗೊಂಡಿರುತ್ತದೆ. ಬಾಕಿ ಉಳಿದ ರಸ್ತೆ ಅಭಿವೃದ್ಧಿ ಕಾರ್ಯ ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. |

. . . . 2

| | | |
|---|---|---|
| (ಆ) | ಈ ರಸ್ತೆಯಲ್ಲಿ ಹಾದು ಹೋಗುವ ಚೋಳನಾಯಕನಹಳ್ಳಿ ಮತ್ತು ತಾವರೆಕೆರೆ ಗ್ರಾಮದಲ್ಲಿ ಎರಡು ಪಥ ರಸ್ತೆ ಎಂದು ತಿಳಿಸಿದ್ದು, ಈ ಗ್ರಾಮಗಳಲ್ಲಿ ಮೇಲು ಸೇತುವೆ ನಿರ್ಮಾಣದ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ; | ಈ ರಸ್ತೆಯು ಹಾದು ಹೋಗುವ ತಾವರೆಕೆರೆ ಹೋಬಳಿಯ ಚೋಳನಾಯಕನಹಳ್ಳಿ ಮತ್ತು ತಾವರೆಕೆರೆ ಗ್ರಾಮಗಳಲ್ಲಿ ನಾಲ್ಕು ಪಥದ 1.30 ಕಿಮೀ ಉದ್ದದ ಉದ್ದೇಶಿತ ಮೇಲ್ಸೇತುವೆಯಲ್ಲಿ ಈ ಹಿಂದೆ ವಿವರವಾದ ಯೋಜನಾ ವರದಿ (DPR) ಯಲ್ಲಿ ಇದ್ದ 270 ಮೀ ವಯಾಡಕ್ಟ್ ಅನ್ನು 990 ಮೀ ವಯಾಡಕ್ಟ್‌ಗೆ ಪರಿಷ್ಕರಿಸಿ ಅನುಮೋದನೆಗೊಂಡಿದ್ದು, ಸದರಿ ಮೇಲ್ಸೇತುವೆ ನಿರ್ಮಾಣಕ್ಕೆ, soil investigation ಕಾರ್ಯ ಪ್ರಗತಿಯಲ್ಲಿದ್ದು, ವಿನ್ಯಾಸಗಳನ್ನು ಅಂತಿಮಗೊಳಿಸಿ ಕಾಮಗಾರಿಯನ್ನು ತ್ವರಿತವಾಗಿ ಕೈಗೊಳ್ಳಲಾಗುವುದು. |
| (ಇ) | ಈ ಕಾಮಗಾರಿಯು ಪೂರ್ಣಗೊಳ್ಳಲು ಈಗಾಗಲೇ ಸಾಕಷ್ಟು ವಿಳಂಬವಾಗಿದ್ದು, ಕಾಮಗಾರಿ ಪೂರ್ಣಗೊಳ್ಳಲು ಎಷ್ಟು ಸಮಯಾವಕಾಶ ಬೇಕಾಗಿದೆ? (ಮಾಹಿತಿ ನೀಡುವುದು) | ಸದರಿ ಕಾಮಗಾರಿಗೆ ಅವಶ್ಯಕವಾಗಿರುವ ಭೂಸ್ವಾಧೀನ ಪ್ರಕ್ರಿಯೆ ಮತ್ತು ಉಪಯುಕ್ತತೆಗಳನ್ನು ಸ್ಥಳಾಂತರಗೊಳಿಸುವ ಕಾಮಗಾರಿಗಳಿಂದಾಗಿ ವಿಳಂಬವಾಗಿದ್ದು, ಸದರಿ ಕಾಮಗಾರಿಯನ್ನು ದಿನಾಂಕ: 31.05.2023 ರೊಳಗೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. |

ಸಂಖ್ಯೆ: ಲೋಇ E-279 ಇಎಪಿ 2022

(ಸಿ.ಸಿ. ಪಾಟೀಲ್)
ಲೋಕೋಪಯೋಗಿ ಸಚಿವರು